ಸುವರ್ಣ ವಸ್ತ್ರ ನೀತಿ 2008 ಯೋಜನೆ

13 (24) ಶ್ರೀ ಗೂಳಿಹಟ್ಟಿ ಡಿ. ಶೇಖರ (ಹೊಸದುರ್ಗ) : ಮಾನ್ಯ ಜವಳಿ ಸಚಿವರು ಈ ಕೆಳಕಂಡ ಪ್ರಶ್ನೆಗೆ ದಯವಿಟ್ಟು ಉತ್ತರಿಸುವರೆ?

'ಸುವರ್ಣ ವಸ್ತ್ರ ನೀತಿ 2008' ಯೋಜನೆಗೆ ಒದಗಿಸಿದ ಒಟ್ಟು ಅನುದಾನವೆಷ್ಟು, ಇದರ ಅವಧಿ ಎಷ್ಟು ವರ್ಷ, ಯಾವಾಗ ಆರಂಭವಾಗಿದೆ, ಯಾವಾಗ ಮುಗಿಯುತ್ತದೆ (ವಿವರ ನೀಡುವುದು) ಇದುವರೆವಿಗೂ ಖರ್ಚಾದ ಅನುದಾನವೆಷ್ಟು; ನಿಗದಿತ ಅನುದಾನ ಬಿಡುಗಡೆ ಮಾಡದಿರಲು ಕಾರಣಗಳೇನು, ಉಳಿದಿರುವ ಅವಧಿಗಾದರೂ ಪೂರ್ಣ ಪ್ರಮಾಣದ ಅನುದಾನ ಬಿಡುಗಡೆಯಾಗುವುದೇ?

ಶ್ರೀ ಆರ್. ವರ್ತೂರು ಪ್ರಕಾಶ್ (ಜವಳಿ ಸಚಿವರು) :

- ಸುವರ್ಣ ವಸ್ತ್ರ ನೀತಿ 2008–13 ಯೋಜನೆಗೆ ರೂ.500.00 ಕೋಟಿ ಅನುದಾನ ನಿಗದಿಪಡಿಸಲಾಗಿತ್ತು.
- ಈ ಯೋಜನೆಯ ಅವಧಿ 5 ವರ್ಷಗಳು.
- ಈ ಯೋಜನೆಯು ದಿನಾಂಕ: 01.04.2008 ರಿಂದ ಆರಂಭವಾಗಿದೆ.
- ಈ ಯೋಜನೆಯ ಅವಧಿ ದಿನಾಂಕ: 31.03.2013 ಕ್ಕೆ ಮುಗಿಯಲಿದೆ.
- ಯೋಜನೆಯ ವರ್ಷವಾರು ನಿಗದಿ, ಬಿಡುಗಡೆ ಹಾಗೂ ವೆಚ್ಚದ ವಿವರ ಈ ರೀತಿ ಇದೆ.

(ರೂ. ಕೋಟಿಗಳಲ್ಲಿ)

ವರ್ಷ	ನೀತಿಯಲ್ಲಿ ನಿಗದಿಪಡಿಸಿದ ಅನುದಾನ	ಆಯವ್ಯಯ ಹಂಚಿಕೆ	ಬಿಡುಗಡೆಯಾದ ಅನುದಾನ	ವೆಚ್ಚ
2008–09	33.00	40.00	20.00	20.00
2009–10	54.50	40.00	22.00	22.00
2010–11	111.25	60.00	45.00	45.00
2011–12	160.25	25.00	25.00	25.00
ಒಟ್ಟು	**359.00**	**165.00**	**112.00**	**112.00**

ಈ ಯೋಜನೆಗೆ ಆಯವ್ಯಯದಲ್ಲಿನ ಹಣಕಾಸಿನ ಅವಕಾಶದಂತೆ ಅನುದಾನವನ್ನು ಬಿಡುಗಡೆ ಮಾಡಲಾಗುತ್ತಿದೆ.

ಬೀದರ್ ಜಿಲ್ಲೆಯಲ್ಲಿ ಭಾರಿ ಮತ್ತು ಮಧ್ಯಮ ಕೈಗಾರಿಕೆಗಳು

29 (18) ಶ್ರೀ ರಹೀಂಖಾನ್ (ಬೀದರ್) : ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಳೆದ ಮೂರು ವರ್ಷಗಳಲ್ಲಿ ಬೀದರ್ ಜಿಲ್ಲೆಯಲ್ಲಿ ಎಷ್ಟು ಭಾರಿ ಮತ್ತು ಮಧ್ಯಮ ಕೈಗಾರಿಕೆಗಳನ್ನು ಸ್ಥಾಪಿಸಲು ಉದ್ಯಮಿಗಳು ಮುಂದೆ ಬಂದಿದ್ದಾರೆ (ಪೂರ್ಣ ಮಾಹಿತಿ ಒದಗಿಸುವುದು);

ಆ) ಸದರಿ ಅವಧಿಯಲ್ಲಿ ಇಲಾಖೆಯಿಂದ ಜಿಲ್ಲೆಯಲ್ಲಿ ಯಾವ ಯಾವ ಕಾರ್ಯಗಳಿಗೆ ಎಷ್ಟೆಷ್ಟು ಹಣವನ್ನು ವೆಚ್ಚ ಮಾಡಲಾಗಿದೆ. (ವಿವರ ಒದಗಿಸುವುದು);

ಇ) ಬೀದರ್(ಉ) ವಿಧಾನಸಭಾ ಕ್ಷೇತ್ರದಲ್ಲಿ ಕೆ.ಐ.ಎ.ಡಿ.ಬಿ. ವತಿಯಿಂದ ಭೂ ಸ್ವಾಧೀನಪಡಿಸಿಕೊಂಡು ಕೈಗಾರಿಕೆಗಳನ್ನು ಉತ್ತೇಜಿಸಲು ಸರ್ಕಾರ ಯಾವ ಕ್ರಮಗಳನ್ನು ಕೈಗೊಂಡಿದೆ. (ಪೂರ್ಣ ವಿವರಗಳನ್ನು ಒದಗಿಸುವುದು);

ಶ್ರೀ ಮುರುಗೇಶ್ ಆರ್. ನಿರಾಣಿ (ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು) :

ಅ) ಕಳೆದ ಮೂರು ವರ್ಷಗಳಲ್ಲಿ 2008–09 ರಿಂದ 2010–11 ರವರೆಗೆ ರಾಜ್ಯ ಉನ್ನತ ಮಟ್ಟದ ಅನುಮೋದನಾ ಸಮಿತಿ (ರೂ.50 ಕೋಟಿಗಿಂತ ಹೆಚ್ಚು) 6 ಯೋಜನಾ ಪ್ರಸ್ತಾವನೆಗಳಿಗೆ ಅನುಮೋದನೆ ನೀಡಿದ್ದು ಇದರಿಂದ ರೂ. 3812.30 ಕೋಟಿ ಬಂಡವಾಳ ಹೂಡಿಕೆಗಾಗಿ, ಸುಮಾರು 10515 ಜನರಿಗೆ ಉದ್ಯೋಗಾವಕಾಶ ದೊರಕಲಿದೆ. ವಿವರವನ್ನು ಅನುಬಂಧ–1 ರಲ್ಲಿ ನೀಡಿದೆ.

ಕಳೆದ ಮೂರು ವರ್ಷಗಳಲ್ಲಿ ರಾಜ್ಯ ಮಟ್ಟದ ಏಕಗವಾಕ್ಷಿ ಒಪ್ಪಿಗೆ ನೀಡಿಕೆ ಸಮಿತಿ (ರೂ.3 ಕೋಟಿಯಿಂದ ರೂ.50 ಕೋಟಿಯವರೆಗೆ) 63 ಯೋಜನಾ ಪ್ರಸ್ತಾವನೆಗಳಿಗೆ ಅನುಮೋದನೆ ನೀಡಿದ್ದು ಇದರಿಂದ ರೂ.361.05 ಕೋಟಿ ಬಂಡವಾಳ ಹೂಡಿಕೆಯಾಗಿ, ಸುಮಾರು 4557